**ಓ.ಎಸ್. ನಂಃ 166/2020**

**ಪಿ.ಡಬ್ಲ್ಯೂಃ 1**

**ದಿನಾಂಕ 07.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಲ್.ವಿ.ಆರ್. ವಕೀಲರಿಂದಃ**

14. ನನ್ನ ಸಹೋದಾರನಾದ ಆನಂದರವರು ಮರಣ ಹೊಂದಿದ್ದು, ಅವರ ಹೆಂಡತಿ ಮತ್ತು ಮಕ್ಕಳು ಬದುಕಿದ್ದಾರೆ. ಆನಂದರವರ ಹೆಂಡತಿ ಮತ್ತು ಮಕ್ಕಳು ಮೈಸೂರಿನಲ್ಲಿ ವಾಸವಿದ್ದಾರೆ. ಆನಂದರವರ ಹೆಂಡತಿಯ ಹೆಸರು ಹೇಮಾವತಿ ಅಂತ ಇದ್ದು, ಆನಂದರವರಿಗೆ ಒಬ್ಬಳೇ ಮಗಳು ಇದ್ದು, ಅವಳ ಹೆಸರು ರಕ್ಷಾ ಅಂತ ಇರುತ್ತದೆ. ಆನಂದರವರ ಹೆಂಡತಿ ಮತ್ತು ಮಗಳನ್ನು ನಾನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

15. ನಾನು, 2 ನೇ ವಾದಿ ಮತ್ತು ನನ್ನ ಸಹೋದಾರನಾದ ಆನಂದರವರು ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗವನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ ಮಾಡಿಕೊಂಡಿರುತ್ತೇವೆ. ಸದರಿ ನೊಂದಾಯಿತ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ, 2 ನೇ ವಾದಿ ಮತ್ತು ನನ್ನ ಸಹೋದಾರನಾದ ಆನಂದರವರ ಮಧ್ಯೆ ಪಾಲು ವಿಭಜನೆ ಆಗಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

16. 1964 ರಲ್ಲಿ ಆದ ಮೌಖಿಕ ಪಾಲು ವಿಭಜನೆಯ ಪ್ರಕಾರ ಸರ್ವೇ ನಂಬರ್ 20 ರ 6 ಎಕರೆ 31 ಗುಂಟೆ ಜಮೀನಿನಲ್ಲಿ ಒಟ್ಟು 6 ಭಾಗವಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ನಾವು ಯಾರಿಗೂ ಸಹ ಮಾರಾಟ ಮಾಡಿರುವುದಿಲ್ಲ. ಸರ್ವೇ ನಂಬರ್ 20/3 ರಲ್ಲಿ 21 ಗುಂಟೆ ಜಮೀನನ್ನು ನನ್ನ ಸಹೋದಾರನಾದ ಆನಂದರವರು ರಾಜೇಶ್ವರಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

17. ಸರ್ವೇ ನಂಬರ್ 20 ರಲ್ಲಿ ಒಟ್ಟು ಎಷ್ಟು ಪೋಡುಗಳಾಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ಪಿತ್ರಾರ್ಜಿತವಾಗಿ ಮತ್ತು ವ್ಯವಸ್ಥಾ ಪತ್ರದ ಮೂಲಕ ಸರ್ವೇ ನಂಬರ್ 20 ರಲ್ಲಿ ಒಟ್ಟು ಎಷ್ಟು ಆಸ್ತಿಗಳು ಬಂದಿವೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರಿಗೆ ಸರ್ವೇ ನಂಬರ್ 20 ರಲ್ಲಿ ಬಂದಿದ್ದ ಆಸ್ತಿಗಳನ್ನು ಯಾರು ಯಾರಿಗೆ ಎಷ್ಟು ವಿಸ್ತೀರ್ಣದ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆದರೆ ನಾನು ಸರ್ವೇ ನಂಬರ್ 20 ರಲ್ಲಿ 3 ಗುಂಟೆ ಜಮೀನಿನನ್ನು ಮಾರಾಟ ಮಾಡಿರುತ್ತೇನೆ.

18. ಸಾಕ್ಷಿಗೆ ಈಗ ದಿನಾಂಕ 30.03.2007 ರ ನೊಂದಾಯಿತ ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಿ ಸದರಿ ಕ್ರಯ ಪತ್ರದಡಿಯಲ್ಲಿ ರಾಜೇಶ್ವರಿ ಎನ್ನುವವರಿಗೆ ನಾನು, ನನ್ನ ತಂದೆ ಮತ್ತು ಸಹೋದರರು ಸೇರಿ ಸರ್ವೇ ನಂಬರ್ 20 ರಲ್ಲಿ 21 ಗುಂಟೆ ಜಮೀನನ್ನು ಮಾರಾಟ ಮಾಡಿರುವ ಕ್ರಯ ಪತ್ರವಾಗಿರುತ್ತದೆ ಎಂದು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು.

19. ಸಾಕ್ಷಿಗೆ ಈಗ ದಿನಾಂಕ 07.07.2008 ರ ನೊಂದಾಯಿತ ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಿ ಸದರಿ ಕ್ರಯ ಪತ್ರದಡಿಯಲ್ಲಿ ರಾಜೇಶ್ವರಿ ಎನ್ನುವವರಿಗೆ ನಾನು, ನನ್ನ ತಂದೆ ಮತ್ತು ಸಹೋದರರು ಸೇರಿ ಸರ್ವೇ ನಂಬರ್ 20 ರಲ್ಲಿ 39 ಗುಂಟೆ ಜಮೀನನ್ನು ಮಾರಾಟ ಮಾಡಿರುವ ಕ್ರಯ ಪತ್ರವಾಗಿರುತ್ತದೆ ಎಂದು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.1 ಮತ್ತು 2 ರ ಪ್ರಕಾರ ಸರ್ವೇ ನಂಬರ್ 20 ರಲ್ಲಿ ರಾಜೇಶ್ವರಿರವರಿಗೆ ಒಟ್ಟು 1 ಎಕರೆ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ.

20. ಸಾಕ್ಷಿಗೆ ಈಗ ದಿನಾಂಕ 29.05.2017 ರ ನೊಂದಾಯಿತ ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಿ ಸದರಿ ಕ್ರಯ ಪತ್ರದಡಿಯಲ್ಲಿ ನವೀನ್ ಕುಮಾರ್ ಸಿ.ಎನ್ ಎನ್ನುವವರಿಗೆ ನಾನು ಮತ್ತು ನನ್ನ ಮಕ್ಕಳು ಸೇರಿ ಸರ್ವೇ ನಂಬರ್ 20 ರಲ್ಲಿ 3 ಗುಂಟೆ ಜಮೀನನ್ನು ಮಾರಾಟ ಮಾಡಿರುವ ಕ್ರಯ ಪತ್ರವಾಗಿರುತ್ತದೆ ಎಂದು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು.

21. ಸಾಕ್ಷಿಗೆ ಈಗ ದಿನಾಂಕ 24.06.2019 ರ ನೊಂದಾಯಿತ ಕ್ರಯ ಪತ್ರದ ದೃಢಿಕೃತ ನಕಲನ್ನು ತೋರಿಸಿ ಸದರಿ ಕ್ರಯ ಪತ್ರದಡಿಯಲ್ಲಿ ಗೋವಿಂದರಾಜು

ಎನ್ನುವವರಿಗೆ 2 ನೇ ವಾದಿ ಸೇರಿ ಸರ್ವೆ ನಂಬರ್ 20 ರಲ್ಲಿ 20 ಗುಂಟೆ ಜಮೀನನ್ನು ಮಾರಾಟ ಮಾಡಿರುವ ಕ್ರಯ ಪತ್ರವಾಗಿರುತ್ತದೆ ಎಂದು ಒಪ್ಪಿದ ಕಾರಣ ಸದರಿ ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು.

22. ನಿಡಿ.1 ರಿಂದ 4 ರ ಖರೀದಿದಾರರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸರ್ವೆ ನಂಬರ್ 20 ರಲ್ಲಿ ರಸ್ತೆಗೆ ಭೂ-ಸ್ವಾಧೀನವಾದ 2 ಗುಂಟೆ ಜಮೀನನ್ನು ವಾದ ಪತ್ರದಲ್ಲಿ ತೋರಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ 2 ಗುಂಟೆ ಜಮೀನು ನನ್ನ ದೊಡ್ಡಪ್ಪನಾದ ಅಪ್ಪೇಗೌಡರ ಹಿಸ್ಸೆಗೆ ಹೋಗಿದ್ದ ಜಮೀನಿನಲ್ಲಿ ಭೂ-ಸ್ವಾಧೀನವಾಗಿರುತ್ತದೆ ಎಂದು ನುಡಿದಿರುತ್ತಾರೆ.

23. ದಿನಾಂಕ 24.08.2015 ರ ವಿಭಾಗ ಪತ್ರದಡಿಯಲ್ಲಿ ನನ್ನ ಮತ್ತು ನನ್ನ ಸಹೋದರರ ಹಿಸ್ಸೆಗೆ ಬಂದಿದ್ದ ಆಸ್ತಿಗಳ ಪೈಕಿ ಕೆಲವು ಆಸ್ತಿಗಳನ್ನು ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ವಿಷಯವನ್ನು ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

24. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ-ರಾಮೇಗೌಡ ಬಿನ್ ನಿಂಗೇಗೌಡರ ಜಮೀನು ಹಾಗೂ ಕಾಳೇಗೌಡ ಮತ್ತು ರಾಘು ರವರ ಜಮೀನು, ಪಶ್ಚಿಮಕ್ಕೆ-ವಾದಿಯರಾದ ನಾವು ಮತ್ತು ನಮ್ಮ ಸಹೋದರನಾದ ಆನಂದ ರವರ ಜಮೀನು, ಉತ್ತರಕ್ಕೆ-ರಾಮನಾಥಪುರ ರಸ್ತೆ ಹಾಗೂ ದಕ್ಷಿಣಕ್ಕೆ-ಶೇಖರರವರ ಜಮೀನು ಇದೆ ಎಂದರೆ ಸರಿ. ಪ್ರತಿವಾದ ಪತ್ರ ಅನುಸೂಚಿ ಆಸ್ತಿಯು ಪ್ರತಿವಾದಿಯರ ತಂದೆಯಾದ ಅಪ್ಪೇಗೌಡರ ಹೆಸರಿನಲ್ಲಿದೆ ಎಂದರೆ ಸರಿ. ನಾವು ವಿನಾಕಾರಣ ಪ್ರತಿವಾದ ಪತ್ರ ಅನುಸೂಚಿ ಆಸ್ತಿಗೆ ಹೋಗಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ತಂದೆಯ ಮರಣದ ನಂತರ ಪ್ರತಿವಾದ ಪತ್ರ ಅನುಸೂಚಿ ಆಸ್ತಿಯ ಖಾತೆಯನ್ನು ಪ್ರತಿವಾದಿಯರು ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

25. ಅಸ್ತಿತ್ವದಲ್ಲಿಯೇ ಇರದಂತಹ ದಾವಾ ಆಸ್ತಿಯನ್ನು ಸೃಷ್ಟಿಸಿ ಪ್ರತಿವಾದಿಯರಿಗೆ ಸೇರಿದ ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರ ಪ್ರಕಾರ ದಾವಾ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ-ಅಪ್ಪೇಗೌಡರ ಜಮೀನು, ಪಶ್ಚಿಮಕ್ಕೆ- ನನ್ನ ತಂದೆಯವರ

ಜಮೀನು, ಉತ್ತರಕ್ಕೆ–ರಾಮನಾಥಪುರ ರಸ್ತೆ ಮತ್ತು ದಕ್ಷಿಣಕ್ಕೆ–ಶೇಖರ್ ರವರ ಜಮೀನು. ನಾನು ಈಗ ಮೇಲೆ ಹೇಳಿದ ಚೆಕ್ಕುಬಂಧಿ ನಿಪಿ.1 ರಲ್ಲಿ ನಮೂದಾಗಿರುವುದಿಲ್ಲ ಬದಲಾಗಿ ನಾವೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

26. ದಾವಾ ಆಸ್ತಿಯ ಸರ್ವೇ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರ ಪ್ರತಿವಾದ ಪತ್ರ ಅನುಸೂಚಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 20 ರಲ್ಲಿ ಇದ್ದ ಜಮೀನನ್ನು ಮಾರಾಟ ಮಾಡಿ ಈಗ ನಮಗೆ ನಿಪಿ.4 ರಲ್ಲಿ ನಮೂದಿಸಿರುವ ಕೇವಲ 2 ಎಕರೆ 39 ಗುಂಟೆ ಜಮೀನು ಮಾತ್ರ ಉಳಿದಿರುತ್ತದೆ ಎಂದರೆ ಸರಿಯಲ್ಲ. ನಿಪಿ.1 ರ ಪ್ರಕಾರ ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇಲ್ಲದಿದ್ದರು ಸಹ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಸತ್ಯಾ ಸತ್ಯತೆಯನ್ನು ಮರೆ ಮಾಚಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 20 ರಲ್ಲಿ ನಮಗೆ ಮೂಲತಃ ಎಷ್ಟು ಆಸ್ತಿಗಳು ಇತ್ತು ಹಾಗೂ ಸರ್ವೇ ನಂಬರ್ 20 ರಲ್ಲಿ ನಾವು ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದು ಉದ್ದೇಶಪೂರಕವಾಗಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**